**2 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ತುಮಕೂರು**

**ಎಸ್.ಸಿ. ನಂ. 96 /2019**

P.W : 21

C.W: 45

**ದಿನಾಂಕ 18.02.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು**

**ಹೆಸರು** : ಪುಟ್ಟೇಗೌಡ

**ಗಂಡನ ಹೆಸರು** : ಬಸವೇಗೌಡ

**ವಯಸ್ಸು** : 42 ವರ್ಷ

**ವೃತ್ತಿ** : ಸಿ.ಪಿ.ಐ, ತುಮಕೂರು ಗ್ರಾಮಾಂತರ ವೃತ್ತ ಪೋಲೀಸ್ ಠಾಣೆ

**ವಾಸಸ್ಥಳ** : ತುಮಕೂರು

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

ನಾನು ದಿ.30.08.2017 ರಿಂದ 11.07.2019 ರವರೆಗೆ ಕುಣಿಗಲ್ ಪೋಲೀಸ್ ಠಾಣೆಯಲ್ಲಿ ಪಿ.ಎಸ್.ಐ ಆಗಿ ಕಾರ್ಯನಿರ್ವಹಿಸಿರುತ್ತೇನೆ.

2. ದಿ.14.11.2018 ರಂದು ನಾನು ಠಾಣೆಯಲ್ಲಿ ಕರ್ತವ್ಯದಲ್ಲಿದ್ದಾಗ ಸಂಜೆ 07.30 ಗಂಟೆಗೆ ಚಾ.ಸಾ.1 ರವರು ಠಾಣೆಗೆ ಹಾಜರಾಗಿ ಸಲ್ಲಿಸಿದ ಲಿಖಿತ ದೂರನ್ನು ಸ್ವೀಕರಿಸಿ ಭಾರತೀಯ ದಂಡ ಪ್ರಕ್ರಿಯಾ ಸಂಹಿತೆ ಕಲಂ. 399 ರಡಿಯಲ್ಲಿ ಠಾಣಾ ಮೊಕದ್ದಮೆ ಸಂಖ್ಯೆ 16/2018 ರಲ್ಲಿ ಪ್ರಕರಣ ದಾಖಲಿಸಿ ಪ್ರಥಮ ವರ್ತಮಾನ ವರದಿ ತಯಾರಿಸಿ ಹಿರಿಯ ಅಧಿಕಾರಿಗಳಿಗೆ ಮತ್ತು ಘನ ನ್ಯಾಯಾಲಯಕ್ಕೆ

ಸಲ್ಲಿಸಿರುತ್ತೇನೆ. ಸಾಕ್ಷಿ ದೂರು ಮತ್ತು ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ದೂರು ಈಗಾಗಲೇ ನಿ.ಪಿ.1 ಎಂದು ಗುರುತಾಗಿದ್ದು, ಸಾಕ್ಷಿಯ ಸಹಿಯನ್ನು ನಿ.ಪಿ.10(ಬಿ) ಎಂದು ಗುರುತು ಮಾಡಲಾಯಿತು. ಪ್ರಥಮ ವರ್ತಮಾನ ವರದಿ ಮತ್ತು ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿ.ಪಿ.58 ಮತ್ತು ಸಾಕ್ಷಿಯ ಸಹಿಯನ್ನು ನಿ.ಪಿ.58(ಎ) ಎಂದು ಗುರುತು ಮಾಡಲಾಯಿತು.

3. ನಂತರ ಪ್ರಕರಣದಲ್ಲಿ ಅಳವಡಿಸಲಾದ ಕಲಂಗಳು ಘೋರ ಸ್ವರೂಪವಾದ್ದರಿಂದ ಮುಂದಿನ ತನಿಖೆಗಾಗಿ ಕಡತವನ್ನು ಚಾ.ಸಾ.47 ರವರಿಗೆ ನಿವೇದಿಸಿಕೊಂಡಿರುತ್ತೇನೆ. ದಿ.26.11.2018 ರಂದು ಚಾ.ಸಾ.47 ರವರು ಆರೋಪಿಗಳ ಪತ್ತೆಯ ಬಗ್ಗೆ ನನ್ನನ್ನು, ಚಾ.ಸಾ. 41, ಚಾ.ಸಾ.35, ಚಾ.ಸಾ.34, ಚಾ.ಸಾ.33, ಚಾ.ಸಾ.32 ರವರನ್ನು ನೇಮಕ ಮಾಡಿದ್ದು, ನೇಮಕದಂತೆ ನಾನು ಹಾಗೂ ಸಿಬ್ಬಂದಿಗಳು ಆರೋಪಿಗಳು ಪತ್ತೆ ಮಾಡಲು ಬೆಂಗಳೂರಿನ ಶ್ರೀನಿವಾಸನಗರ , ಶ್ರೀನಗರದ ಕಡೆ ಹೋಗಿ ಹುಡುಕಲಾಗಿ ಶ್ರೀನಿವಾಸನಗರ, ಸರ್ಕಲ್ ಬಳಿ ಇರುವ ತರಕಾರಿ ಮಾರಾಟ ಮಾಡುವ ಸ್ಥಳದಲ್ಲಿ 6, 7, 8 ಮತ್ತು 9 ಆರೋಪಿಗಳು ಪತ್ತೆಯಾಗಿದ್ದು ಇವರುಗಳನ್ನು ವಶಕ್ಕೆ ಪಡೆದು ಚಾ.ಸಾ.47 ರವರ ಮುಂದೆ ಅದೇ ದಿನ ವರದಿ ಮುಖೇನ ಹಾಜರಪಡಿಸಿರುತ್ತೇನೆ. ಸಾಕ್ಷಿ ವರದಿಯನ್ನು ನೋಡಿ ಗುರುತಿಸಿದ್ದು ವರದಿಯನ್ನು ನಿ.ಪಿ.59 ಎಂದು ಸಾಕ್ಷಿಯ ಸಹಿಯನ್ನು ನಿ.ಪಿ.59(ಎ) ಎಂದು ಗುರುತಿಸಲಾಯಿತು. ಸಾಕ್ಷಿ ನ್ಯಾಯಾಲಯದ ಮುಂದೆ

ಹಾಜರಿರುವ 6 ರಿಂದ 9 ನೇ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲು ಆರೋಪಿಗಳ ಪರ ಶ್ರೀ.ಆರ್.ಜಿ.ಆರ್./ ಜಿ.ಎನ್. ವಕೀಲರಿಂದಃ**

4. ದೂರನ್ನು ಪಿರ್ಯಾದುದಾರರು ಬರೆದುಕೊಂಡು ಬಂದಿರುತ್ತಾರೆ. ಪಿರ್ಯಾದುದಾರರು ಯಾವ ಯಾವ ಸ್ಥಳಗಳಲ್ಲಿ ಎಷ್ಟು ಎಷ್ಟು ಹಣವನ್ನು ವಸೂಲು ಮಾಡಿ ತನ್ನ ಬಳಿ ಇಟ್ಟಿದ್ದರು ಎಂದು ನಮೂದು ಮಾಡಿರುವುದಿಲ್ಲ. ಆರೋಪಿತರ ಮೇಲೆ ಪಿರ್ಯಾದುದಾರರು ಸುಳ್ಳು ದೂರನ್ನು ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಪಿರ್ಯಾದುದಾರರು ಬಸ್‌ನಲ್ಲಿ ಪ್ರಯಾಣ ಮಾಡದೇ ಇದ್ದರೂ ಬಸ್ ನಲ್ಲಿ ಪ್ರಯಾಣ ಮಾಡಿದ್ದೇನೆ ಎಂದು ದೂರಿನಲ್ಲಿ ಸುಳ್ಳು ಬರೆದಿದ್ದಾರೆ ಎಂದರೆ ಸರಿಯಲ್ಲ. ಆರೋಪಿತರನ್ನು ನಾವು ಪತ್ತೆ ಮಾಡಿ ನಮ್ಮ ಸಿ.ಪಿ.ಐ ರವರ ಮುಂದೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ದೂರಿನಲ್ಲಿ ಆರೋಪಿತರ ಹೆಸರು ನಮೂದಿಸಿರುವುದಿಲ್ಲ ಎಂದರೆ ಸರಿ.

ಮರುವಿಚಾರಣೆಃ ಇಲ್ಲ

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ

2 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ತುಮಕೂರು.